RNU AIR DHARWAD

# OCTOBER 21, 2024
# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳ, ವಿಧಾನ ಪರಿಷತ್‌ನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ, ಉಪ ಚುನಾವಣೆಗೆ, ಇಂದು ಮತದಾನ.
- ರಾಜ್ಯ ನೀರಾವರಿ ನಿಗಮಗಳ ಅಣೆಕಟ್ಟೆ ನಿರ್ವಹಣೆ ಬಗ್ಗೆ, ಉನ್ನತ ಮಟ್ಟದ ತಾಂತ್ರಿಕ ಸಮಿತಿ ರಚಿಸಲಾಗಿದೆ – ಆರ್.ಬಿ.ತಿಮ್ಮಾಪೂರ.
- ಹೆಗ್ಗಡದೇವನ ಕೋಟೆ, ಹೊಸಳ್ಳಿಯ, ವಿವೇಕ ಗಿರಿಜನ ಶೈಕ್ಷಣಿಕ ಕೇಂದ್ರದಲ್ಲಿ, ರಾಜ್ಯ ಮಟ್ಟದ ವಿಜ್ಞಾನ ಶಿಬಿರ.
- ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮ; ಕಾಲು, ಬಾಯಿ ಜ್ವರ ರೋಗದ ಮಾಸಿಕ ಲಸಿಕೆ ಅಭಿಯಾನ, ಇಂದಿನಿಂದ ಆರಂಭ.

<><><>

ಈಗ ವಾರ್ತೆಗಳ ವಿವರ

<><><>

ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಅವರ ರಾಜಿನಾಮೆಯಿಂದ ತೆರವಾದ, ವಿಧಾನ ಪರಿಷತ್‌ನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಉಪ ಚುನಾವಣೆ, ಇಂದು ನಡೆಯಲಿದೆ. ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಮತದಾನ ನಡೆಯಲಿದ್ದು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಮತದಾನ ಮಾಡಲಿದ್ದಾರೆ. ವ್ಯಾಪಕ ಭದ್ರತೆ ಕೈಗೊಳ್ಳಲಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ಮುಲ್ಲೈ ಮುಹಿಲನ್ ತಿಳಿಸಿದ್ದಾರೆ. ಇಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ ಮತದಾನಕ್ಕೆ ಅವಕಾಶ ನೀಡಲಾಗಿದೆ. ಒಟ್ಟು 392 ಮತಗಟ್ಟೆಗಳಿದ್ದು, 53 ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದೆ. 6 ಸಾವಿರದ 32 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಇದೇ 24 ರಂದು ಮತ ಎಣಿಕೆ ನಡೆದು, ಅಂದೇ ಫಲಿತಾಂಶ ಪ್ರಕಟವಾಗುವ ನಿರೀಕ್ಷೆ ಇದೆ.

<><><>

ಬೆಳಗಾವಿಯ ಮುಂಬರುವ ಚಳಿಗಾಲದ ಡಿಸೆಂಬರ್ ಅಧಿವೇಶನದಲ್ಲಿ, ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಲಾಗುವುದು ಎಂದು, ವಿಧಾನಸಭೆ ಪ್ರತಿ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕಳೆದ ಬಾರಿ ಬೆಳಗಾವಿ ಅಧಿವೇಶನದಲ್ಲಿ ನಡೆಸಿದ ಚರ್ಚೆಗಳಿಗೆ ಸಂಬಂಧಿಸಿ, ತೆಗೆದುಕೊಂಡ ನಿರ್ಧಾರಗಳ ಪೈಕಿ, ಎ ಸ್ಟ ಜಾರಿಯಾಗಿವೆ ಎಂಬುದನ್ನು, ಮುಖ್ಯಮಂತ್ರಿ ತಿಳಿಸಬೇಕು ಎಂದು, ತಾವು ಆಗ್ರಹಿಸುವುದಾಗಿ ಹೇಳಿದರು. ರಾಜಧಾನಿ ಬೆಂಗಳೂರಿನಲ್ಲಿ ಮತ್ತೊಂದು ವಿಮಾನ ನಿಲ್ದಾಣ ನಿರ್ಮಿಸಲು, ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ತುಮಕೂರು–ಶಿರಾ ಭಾಗದಲ್ಲಿ ಆಗಬೇಕು ಎಂದು, ಅರವಿಂದ ಬೆಲ್ಲದ ಒತ್ತಾಯಿಸಿದರು.

<><><>

ಕೃಷ್ಣ ನದಿ ಕಣಿವೆಯ, ಕೃಷ್ಣ ಭಾಗ್ಯ ಜಲ ನಿಗಮ ಮತ್ತು ಕರ್ನಾಟಕ ನೀರಾವರಿ ನಿಗಮಗಳ ವ್ಯಾಪ್ತಿಯ, ಅಣೆಕಟ್ಟೆ ಮತ್ತು ಬ್ಯಾರೇಜ್‌ಗಳ ನಿರ್ವಹಣೆ ಬಗ್ಗೆ, ವಾಸ್ತವಾಂಶಗಳ ವರದಿ ಸಲ್ಲಿಸಲು, ಉನ್ನತ ಮಟ್ಟದ ತಾಂತ್ರಿಕ ಸಮಿತಿ ರಚಿಸಲಾಗಿದೆ ಎಂದು, ಕೃಷ್ಣ ಮೇಲ್ದಂಡೆ ಯೋಜನೆ, ನೀರಾವರಿ ಸಲಹಾ ಸಮಿತಿ ಅಧ್ಯಕ್ಷ, ಆರ್.ಬಿ.ತಿಮ್ಮಾಪೂರ ತಿಳಿಸಿದ್ದಾರೆ. ಬಾಗಲಕೋಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಘಟಪ್ರಭಾ ನದಿ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಗೆ, ತಜ್ಞರ ಸಮಿತಿಯನ್ನು, ಜಲ ಸಂಪನ್ಮೂಲ ಇಲಾಖೆ ರಚಿಸಿದೆ. ನದಿಗಳ ಜಲಾನಯನ ಪ್ರದೇಶ, ಹರಿವಿನ ಹಾದಿಯಲ್ಲಿ ಪ್ರವಾಹದಿಂದ ಉಂಟಾಗುವ ಹಾನಿ, ನಿರ್ವಹಿಸುವ ದಾರಿ, ಶಾಶ್ವತ ಪರಿಹಾರಕ್ಕೆ ತಜ್ಞರು ಸಲಹೆ ನೀಡಲಿದ್ದಾರೆ, ಎಂದರು.

<><><>

ನೂತನ ತಂತ್ರಜ್ಞಾನ ಬಳಸಿ, ಕಲಬುರಗಿ ಜಿಲ್ಲೆಯ ರೈತರ ಆದಾಯ ದ್ವಿಗುಣಗೊಳಿಸಲು, ನೀಲ ನಕ್ಷೆ ತಯಾರಿಸುವಂತೆ, ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ. ಬೆಂಗಳೂರಿನ ವಿಕಾಸ ಸೌಧದಲ್ಲಿ, ಕೃಷಿ, ತೋಟಗಾರಿಕೆ, ರೇ ಿ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಇಲಾಖೆಯ, ಕಲಬುರಗಿ ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ, ಸಚಿವರು ಸಭೆ ನಡೆಸಿದರು. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ, ಸಣ್ಣ ಅನುದಾನ ಯೋಜನೆ ಅಡಿ, ಕೃಷಿ ಸಂಬಂಧಿ ನವೀನ ಕಲ್ಪನೆಗಳ ಅನುಷ್ಠಾನಕ್ಕೆ, ತಜ್ಞ ಸಮಾಲೋಚಕರನ್ನು ನೇಮಿಸುವಂತೆ, ಸಚಿವರು ಸೂಚಿಸಿದರು.

<><><>

ಖನಿಜ ಪ್ರತಿಷ್ಠಾನ ನಿಧಿಯಲ್ಲಿ, ಉತ್ತರಕನ್ನಡ ಜಿಲ್ಲೆಯಾದ್ಯಂತ ಅಂಗನವಾಡಿ ಮತ್ತು ಶಾಲೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಮೀಸಲಿಡುವಂತೆ, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಸೂಚಿಸಿದ್ದಾರೆ. ಕಾರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಗಣಿಗಾರಿಕೆಗೆ ಒಳಪಡುವ, ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ, ಖನಿಜ ಪ್ರತಿಷ್ಠಾನ ನಿಧಿ ಅಡಿ, ಕಾಮಗಾರಿಗಳನ್ನು ಕೈಗೊಳ್ಳುವಂತೆ, ಸಚಿವರು ನಿರ್ದೇಶಿಸಿದರು.

<><><>

ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲೂಕಿನ, ಕಬಿನಿ ಜಲಾಶಯದ ಹಿನ್ನೀರಿನಲ್ಲಿ, ದಟ್ಟಾರಣ್ಯದ ಹೊಸಳ್ಳಿಯ ವಿವೇಕ ಗಿರಿಜನ ಶೈಕ್ಷಣಿಕ ಕೇಂದ್ರ, ವಿಜ್ಞಾನ ಪ್ರಯೋಗಾಲಯವಾಗಿ ಪರಿವರ್ತನೆಗೊಂಡಿದೆ. ಎಸ್.ಎಸ್.ಎಲ್.ಸಿ ಮಕ್ಕಳಿಗಾಗಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಏರ್ಪಡಿಸಿರುವ, ಐದು ದಿನಗಳ 'ಅನ್ವೇ ಣೆ', ರಾಜ್ಯ ಮಟ್ಟದ ವಿಜ್ಞಾನ ಶಿಬಿರದಲ್ಲಿ, ರಾಜ್ಯದ 24 ಜಿಲ್ಲೆಗಳಿಂದ 113 ಮಕ್ಕಳು ಪಾಲ್ಗೊಂಡಿದ್ದಾರೆ. ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಜೀವಶಾಸ್ತ್ರ ವಿ ಯಗಳಲ್ಲಿ ಪ್ರಯೋಗಗಳನ್ನು ಕೈಗೊಂಡು, ಪ್ರಯೋಗಾಲಯದಲ್ಲಿ ಪ್ರತಿಭಾ ಪ್ರದರ್ಶನ ಮಾಡುತ್ತಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ, ಶೈಕ್ಷಣಿಕ ಪ್ರಕಲ್ಪದ ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪ್ರವೀಣಕುಮಾರ ಸಯ್ಯಪರಾಜು.

<><><>

ಸಿ.ಇ.ಓ. ಪ್ರವೀಣಕುಮಾರ ಸಯ್ಯಪರಾಜು ಧ್ವನಿ 45 ಸೆಕೆಂದುಗಳು

<><><>

ಈಗ ಪ್ರಕಟಣೆ..

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>

(42 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪೊಲೀಸ್ ಹುತಾತ್ಮರ ಸಂಸ್ಮರಣ ದಿನವನ್ನು, ಇಂದು ದೇಶಾದ್ಯಂತ ಆಚರಿಸಲಾಗುತ್ತಿದೆ. ದೇಶಾದ್ಯಂತ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರತರಾಗಿದ್ದ, 216 ಜನ ಪೊಲೀಸ್ ಸಿಬ್ಬಂದಿ ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಒಟ್ಟು 12 ಜನ ಪೊಲೀಸ್ ಸಿಬ್ಬಂದಿ ಕರ್ತವ್ಯದ ಮೇಲೆ ಪ್ರಾಣಾಹುತಿ ಗೈಯ್ದಿದ್ದಾರೆ.

<><><>

ಇಂದು ಬೆಳಗ್ಗೆ 8 ಗಂಟೆಗೆ, ಬೆಂಗಳೂರಿನ ಕೇಂದ್ರ ಮೀಸಲು ಪೊಲೀಸ್ ಪಡೆಯ, ಕವಾಯತು ಮೈದಾನದಲ್ಲಿ, 'ಪೊಲೀಸ್ ಸಂಸ್ಮರಣ ದಿನಾಚರಣೆ' ಜರುಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಖಾತೆ ಸಚಿವ ಡಾಕ್ಟರ್ ಜಿ. ಪರಮೇಶ್ವರ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು, ಹುತಾತ್ಮ ಪೊಲೀಸ್ ಸಿಬ್ಬಂದಿಗೆ ಗೌರವ ನಮನ ಸಲ್ಲಿಸಲಿದ್ದಾರೆ.

<><><>

ಧಾರವಾಡದ ಸಶಸ್ತ್ರ ಮೀಸಲು ಪೊಲೀಸ್ ಪಡೆ ಕವಾಯತು ಮೈದಾನದ, ಹುತಾತ್ಮರ ಸ್ಮಾರಕಕ್ಕೆ, ಇಂದು ಬೆಳಗ್ಗೆ 8 ಗಂಟೆಗೆ, ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಬಿ.ಜಿ.ರಮಾ ಹಾಗೂ ಭಾರತೀಯ ತಂತ್ರಜ್ಞಾನ ಸಂಸ್ಥೆಯ ಡೀನ್ ಪ್ರೊಫೆಸರ್ ಎಸ್.ಎಂ.ಶಿವಪ್ರಸಾದ, ಶ್ರದ್ಧಾಂಜಲಿ ಸಲ್ಲಿಸಲಿದ್ದಾರೆ.

<><><>

ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ, 6ನೇ ಸುತ್ತಿನ ಕಾಲು, ಬಾಯಿ ಜ್ವರ ರೋಗದ ವಿರುದ್ಧ, ಲಸಿಕಾ ಅಭಿಯಾನ ಇಂದಿನಿಂದ ನವೆಂಬರ್ 20ರ ವರೆಗೆ ರಾಜ್ಯಾದ್ಯಂತ ಆಯೋಜಿಸಿದೆ. ಕೃಷಿಕರು ಮತ್ತು ಹೈನುಗಾರರ ಅನುಕೂಲತೆ ದೃಷ್ಟಿಯಿಂದ, ಬೆಳಗ್ಗೆ 6.30 ರಿಂದ 11 ಗಂಟೆಯ ವರೆಗೆ, ಲಸಿಕೆ ನೀಡಲಾಗುತ್ತಿದೆ. ಕಾಲು, ಬಾಯಿ ರೋಗ ಎತ್ತು, ಹೋರಿ, ಹಸು, ಎಮ್ಮೆ ಮತ್ತು ಹಂದಿಗಳಿಗೆ ತಗಲುವ ಮಾರಕ ರೋಗವಾಗಿದ್ದು, ರೈತರಿಗೆ ಸಾಕಷ್ಟು ಆರ್ಥಿಕ ನಷ್ಟ ಉಂಟುಮಾಡುತ್ತದೆ. ಕಾಲು, ಬಾಯಿ ರೋಗ ವೈರಾಣುವಿನಿಂದ ಬರುವ ಅಂಟು ಜಾಡ್ಯವಾಗಿದೆ. ಲಸಿಕೆ ಹಾಕುವುದೊಂದೇ ರೋಗ ನಿಯಂತ್ರಣಕ್ಕೆ ದಾರಿ. ವರ್ಷದಲ್ಲಿ ಕನಿಷ್ಠ ಎರಡು ಬಾರಿ ಲಸಿಕೆ ಹಾಕುವುದರಿಂದ ರೋಗ ತಡೆಗಟ್ಟಲು ಸಾಧ್ಯವಾಗಲಿದೆ. ಗರ್ಭಧರಿಸಿದ ಹಸು, ಎಮ್ಮೆಗಳಿಗೂ ಸಹ ತಪ್ಪದೇ ಲಸಿಕೆ ಹಾಕಿಸುವಂತೆ, ಪಶು ಪಾಲನಾ ಇಲಾಖೆ ಮನವಿ ಮಾಡಿದೆ.

<><><>

ಸಮಾಜವೇ ಒಂದು ಅದ್ಭುತ ವೃಂದಮೇಳ. ಸಂಗೀತದಿಂದ ಆತ್ಮ ಸಂತೋಷ ಸಿಗುತ್ತದೆ. ಧಾರವಾಡ ಘರಾಣೆಯ, ಉಸ್ತಾದ್ ಹಮೀದ್ ಖಾನ್ ಕುಟುಂಬದ ಸಿತಾರ್ ಸಾಧನೆ, ಸ್ಮರಣೀಯ ಎಂದು ಕವಿ ಜಯಂತ ಕಾಯ್ಕಿಣಿ ಶ್ಲಾಘಿಸಿದ್ದಾರೆ.

ಧಾರವಾಡದ ಸೃಜನಾ ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ, ಉಸ್ತಾದ್ ಹಮೀದ್ ಖಾನ್ ಸ್ಮರಣಾರ್ಥ, ಪುಣೆಯ ಹಿರಿಯ ಗಾಯಕ ಪಂಡಿತ ಆನಂದ ಭಾಟೆ, ಮಿರಜ್ ನ ನೌಶಾದ್ ಗುಲಾಬ್‌ಸಾಹೇಬ್ ಸಿತಾರಮೇಕರ್ ಅವರನ್ನು ಸನ್ಮಾನಿಸಿ, ಅವರು ಮಾತನಾಡಿದರು.

<><><>

ಕವಿ ಜಯಂತ್ ಕಾಯ್ಕಿಣಿ ಧ್ವನಿ 25 ಸೆಕೆಂದುಗಳು

<><><>

ನಾಡಿನ ಖ್ಯಾತ ವಿಮರ್ಶಕ, ಡಾಕ್ಟರ್ ಜಿ.ಎಸ್. ಆಮೂರ ಅವರು, ವಿಮರ್ಶೆ, ಭಾಷಾಂತರ, ಕೃತಿ ರಚನೆ ಮೂಲಕ, ಸಾಹಿತ್ಯಕ್ಕೆ ಹೊಳಪು; ಮನುಷ್ಯ ಸಂಬಂಧಗಳಿಗೆ ಹೊಸ ಹೊಳವು ನೀಡಿದರು ಎಂದು, ಸಾಹಿತಿ ಡಾಕ್ಟರ್ ಎಚ್.ಎಸ್. ರಾಘವೇಂದ್ರರಾವ್ ಹೇಳಿದ್ದಾರೆ. ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಜಿ.ಬಿ. ಜೋಶಿ ಮೆಮೊರಿಯಲ್ ಟ್ರಸ್ಟ್ ಆಯೋಜಿಸಿದ್ದ, ಡಾಕ್ಟರ್ ಜಿ.ಎಸ್ ಆಮೂರ ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

<><><>

ಡಾಕ್ಟರ್ ಎಚ್.ಎಸ್. ರಾಘವೇಂದ್ರರಾವ್ ಧ್ವನಿ 45 ಸೆಕೆಂದುಗಳು

<><><>

ಡಾಕ್ಟರ್ ಜಿ.ಎಸ್. ಆಮೂರ ಅವರ, ಬೇಂದ್ರೆ ಸಾಹಿತ್ಯ ವಿಮರ್ಶೆಯ ಲೇಖನಗಳನ್ನು ಒಳಗೊಂಡ, 'ಒಳಗಿರುವ ಬೆಳಕು' ಕೃತಿಯನ್ನು, ಡಾಕ್ಟರ್ ರಮಾಕಾಂತ ಜೋಶಿ ಬಿಡುಗಡೆಗೊಳಿಸಿದರು. ಬಳಿಕ, ಆಮೂರರ ಸೃಜನಶೀಲ ಕೃತಿಗಳು, ಅನುವಾದದ ಸಿದ್ಧಾಂತ ಮತ್ತು ಅನುಸರಣೆ ಕುರಿತು, ತಜ್ಞರ ಗೋಷ್ಠಿಗಳು ನಡೆದವು.

<><><>

ರಾಜ್ಯದಲ್ಲಿ ಮುಂದಿನ ಮೂರು ದಿನ, ಮಳೆ ಮುಂದುವರೆಯಲಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಬಳ್ಳಾರಿ ಹಾಗೂ ತುಮಕೂರು ಸೇರಿದಂತೆ, ಹಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

<><><>

ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ, ಸಂತೋ ` ಲಾಡ ಅವರ ಅಧ್ಯಕ್ಷತೆಯಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಜನ ಸಂಪರ್ಕ ಸಭೆ ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳ, ವಿಧಾನ ಪರಿಷತ್‌ನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ, ಉಪ ಚುನಾವಣೆಗೆ, ಇಂದು ಮತದಾನ.
- ರಾಜ್ಯ ನೀರಾವರಿ ನಿಗಮಗಳ ಅಣೆಕಟ್ಟೆ ನಿರ್ವಹಣೆ ಬಗ್ಗೆ, ಉನ್ನತ ಮಟ್ಟದ ತಾಂತ್ರಿಕ ಸಮಿತಿ ರಚಿಸಲಾಗಿದೆ – ಆರ್.ಬಿ.ತಿಮ್ಮಾಪೂರ.
- ಹೆಗ್ಗಡದೇವನ ಕೋಟೆ, ಹೊಸಳ್ಳಿಯ, ವಿವೇಕ ಗಿರಿಜನ ಶೈಕ್ಷಣಿಕ ಕೇಂದ್ರದಲ್ಲಿ, ರಾಜ್ಯ ಮಟ್ಟದ ವಿಜ್ಞಾನ ಶಿಬಿರ.
- ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮ; ಕಾಲು, ಬಾಯಿ ಜ್ವರ ರೋಗದ ಮಾಸಿಕ ಲಸಿಕೆ ಅಭಿಯಾನ, ಇಂದಿನಿಂದ ಆರಂಭ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ